**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 3/2010**

**ದೋ.ಸಾ. : 130 ಪ್ರಾ.ಸಾ. : 60**

ಸಾಕ್ಷಿಯ ಹೆಸರು : ಕುಮಾರಯ್ಯ ಹೆಗಡೆ.
ತಂದೆಯ ಹೆಸರು : ನಾಗರಾಜ ಶಾಸ್ತ್ರಿ ಬಿ ಎನ್
ವಯಸ್ಸು : 66 ವರ್ಷ
ಉದ್ಯೋಗ : ನಿವೃತ್ತ, ಮ್ಯಾನೇಜರ್ ಎಸ್ ಬಿ ಎಮ್. ಸಿದ್ದಾಪುರ.
ವಾಸ : ಕಾರ್ಕಳ, ಉಡುಪಿ.

**ದಿನಾಂಕಃ 25-01-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ**

1. ನಾನು ಎಸ್ .ಬಿ ಎಮ್, ಸಿದ್ದಾಪುರ ಶಾಖೆಯಲ್ಲಿ 2004 ರಿಂದ 2007 ರವರೆಗೆ ಮ್ಯಾನೇಜರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಕಾನಗೋಡು ಗ್ರಾಮ ಪಂಚಾಯತಿಯ ಖಾತೆ ನಮ್ಮ ಬ್ಯಾಂಕಿನಲ್ಲಿ ಇತ್ತು. ನನಗೆ ಆರೋಪಿಯ ಪರಿಚಯ ಇರುವುದಿಲ್ಲ. ದಿನಾಂಕ 13.09.2005 ರ ಪತ್ರದ ಮೂಲಕ ಲೋಕಾಯುಕ್ತ ಆರಕ್ಷಕ ನಿರೀಕ್ಷಕರು ಕಾರವಾರರವರು ಕಾನಗೋಡು ಗ್ರಾಮ ಪಂಚಾಯತಿಯ ಅಧ್ಯಕ್ಷ ಹಾಗೂ ಕಾರ್ಯದರ್ಶಿಯವರ ಹೆಸರಿನಲ್ಲಿರುವ ಸ್ವಚ್ಛ ಗ್ರಾಮ ಯೋಜನೆಯ ಖಾತೆ ಬಗ್ಗೆ ಮಾಹಿತಿ ನೀಡುವಂತೆ ಕೇಳಿದ್ದರು. ಈಗ ಆ ಪತ್ರ ನೋಡಿರುತ್ತೇನೆ. ಅದನ್ನು ಪಡೆದಾಗ ಅದರಲ್ಲಿರುವ ಹಾಕಿರುವ ನನ್ನ ರುಜು ಇರುತ್ತದೆ. ಆ ಪತ್ರವನ್ನು ಈಗಾಗಲೇ ನಿಪಿ-29 ಎಂದು ಗುರುತಿಸಲಾಗಿದೆ. ಸಾಕ್ಷಿಯ ರುಜುವನ್ನು ನಿಪಿ-29(ಬಿ) ಎಂದು ಗುರುತಿಸಲಾಯಿತು. ಈ ಬಗ್ಗೆ ನಾನು ಕಾನಗೋಡು ಗ್ರಾಮ ಪಂಚಾಯತಿಯ ಅಧ್ಯಕ್ಷಕರು ಮತ್ತು ಕಾರ್ಯದರ್ಶಿಯವರ ಹೆಸರಿಗೆ ಇದ್ದ ಖಾತೆಯ ತಖ್ತೆ ದೃಢೀಕೃತ ನಕಲು, ಖಾತೆ ತೆರೆಯಲು ಸಲ್ಲಿಸಿರುವ ಅರ್ಜಿ, ಎರಡು ಚೆಕ್ ದೃಢೀಕೃತ ನಕಲು ಕಳುಹಿಸಿರುತ್ತೇನೆ. ಈಗ ಅವುಗಳನ್ನು ನೋಡಿರುತ್ತೇನೆ. ಅವುಗಳನ್ನು ನಿಪಿ-30 ರಿಂದ 35 ಎಂದು ಈಗಾಗಲೇ ಗುರುತಿಸಲಾಗಿದೆ. ಅವುಗಳಲ್ಲಿ ನನ್ನ ರುಜು ಇವೆ. ಸಾಕ್ಷಿಯ ರುಜುವನ್ನು ನಿಪಿ-30(ಎ), 31(ಎ), 32(ಎ), 33(ಎ), 34(ಎ), 35(ಎ) ಎಂದು ಗುರುತಿಸಲಾಯಿತು. ನಿಪಿ-33 ರಿಂದ 35 ರಲ್ಲಿ ನನ್ನ ಸಣ್ಣ ರುಜುಗಳು ಇವೆ. ಈಗ ತೋರಿಸಿದ ದಾಖಲಾತಿ ಸದರಿ ಗ್ರಾಮ ಪಂಚಾಯತಿಯ ಕಾರ್ಯದರ್ಶಿಯವರು ಡಿಡಿ ನೀಡಲು ಸಲ್ಲಿಸಿರುವ ಅರ್ಜಿಯ ದೃಢೀಕೃತ ನಕಲು ಆಗಿದೆ. ಅದರಲ್ಲಿ ನನ್ನ ರುಜು ಇದೆ. ಅದನ್ನು ನಿಪಿ-88

ಎಂದು ಗುರುತಿಸಲಾಯಿತು. ಸಾಕ್ಷಿಯ ರುಜುವನ್ನು ನಿಪಿ-88(ಎ) ಎಂದು ಗುರುತಿಸಲಾಯಿತು. ಅದರಲ್ಲಿ ಎರಡು ಅರ್ಜಿ ಇದೆ.

**ಪಾಟೀ ಸವಾಲುಃ ಆರೋಪಿತರ ವಕೀಲರಾದ ಶ್ರೀ ಜಿ ಟಿ ಎನ್ ರವರಿಂದಃ-**

2. ಆರಕ್ಷಕ ನಿರೀಕ್ಷಕರು ಪತ್ರದಲ್ಲಿ ಕೋರಿದ್ದ ಡಿಡಿಗಳನ್ನು ನಾನು ನೀಡಿದ್ದೇನಾ ಎಂದರೆ ನೆನಪಿಲ್ಲ. ಅದರಲ್ಲಿ ಹಣವನ್ನು ಕಾರ್ಯನಿರ್ವಾಹಣಾ ಅಭಿಯಂತರರು ಜಿಲ್ಲಾ ಪಂಚಾಯತ ರವರ ಹೆಸರಿಗೆ ನೀಡಲು ಕೋರಿದ್ದಾರೆ. ಇನ್ನೊಂದು ಅರ್ಜಿಯನ್ನು ಸಹಾಯಕ ಕಾರ್ಯನಿರ್ವಾಹರ ಅಭಿಯಂತರರ ಹೆಸರಿನಲ್ಲಿ ನೀಡಲು ಕೋರಿ ಸಲ್ಲಿಸಿದ್ದಾರೆ. ಅವರೆಡೂ ನಿಪಿ-88 ರಲ್ಲಿ ಇದೆ.

**ಮರು ವಿಚಾರಣೆಃ – ಇಲ್ಲ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ